ಸಾಕ್ಷಿಯನ್ನು ದಿಃ 10-10-2025 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ವಾಯ್ ಆರ್ ಜಿ ವಕೀಲರಿಂದ (6 ನೇ ಪ್ರತಿವಾದಿಯ ಪರವಾಗಿ)**

ದಾವಾ ಆಸ್ತಿ ಮನೆ ಆಸ್ತಿಯಾಗಿರುತ್ತದೆ. ದಾವಾ ಆಸ್ತಿಯನ್ನು ಜಮೀನು ಎಂದು ನಾನಾಗಲೀ, ನನ್ನ ಸಹೋದರ ಜವಾಹರಲಾಲಸಾ ರಾಗಲಿ ಯಾವುದೇ ದಾಖಲೆಯಲ್ಲಿ ಬರೆಯಿಸಿಲ್ಲ. ದಾವಾ ಆಸ್ತಿ ಮೂಲತಃ ಪ್ರಮೀಳಾಬಾಯಿಯವರಿಗೆ ಸೇರಿತ್ತು ಮತ್ತು ಅವರೇ ಸಂಪೂರ್ಣ ಮಾಲೀಕರಾಗಿದ್ದರು ಎಂದರೆ ಸರಿ. ಪ್ರಮೀಳಾಬಾಯಿ ದಿಃ11.06.1999 ರಂದು ದಾವಾ ಆಸ್ತಿಯನ್ನು ತನ್ನ ಮಗಳಾದ ಗಂಗೂಬಾಯಿ ಇವರಿಗೆ ನೋಂದಾಯಿತ ದಾಖಲೆ ಮೂಲಕ ಭಕ್ಷೀಸ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಭಕ್ಷೀಸ ಪತ್ರದ ಆಧಾರದಲ್ಲಿ ಗಂಗೂಬಾಯಿ ದಾವಾ ಆಸ್ತಿಗೇ ಸಂಪೂರ್ಣ ಮಾಲೀಕರಾಗಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ಸುಮಿತ್ರಾಬಾಯಿಗೆ ಯಾವುದೇ ಹಕ್ಕು ಪ್ರಾಪ್ತವಾಗಿಲ್ಲ ಎಂದರೆ ಸರಿಯಲ್ಲ. ಸುಮಿತ್ರಾಬಾಯಿ ಇವರು ಜವಾಹರಲಾಲಸಾ ಇವರ ಹೆಂಡತಿ ಎಂದರೆ ಸರಿ. ಸದರಿ ಜವಾಹರಲಾಲಸಾ ಇವರಿಗೂ ಸಹ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಪ್ರಾಪ್ತವಾಗಿಲ್ಲ ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ನನಗೂ ಸಹ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಪ್ರಾಪ್ತವಾಗಿಲ್ಲ ಎಂದರೆ ಸರಿಯಲ್ಲ.

ಜವಾಹರಲಾಲಸಾ 8 ನೇ ತರಗತಿಯವರೆಗೆ ಓದಿದ್ದರು. ಅವರು ಬರವಣಿಗೆಯಲ್ಲಿ ಸಹಿ ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಮೊದಲು ಬರವಣಿಗೆಯಲ್ಲಿ ಸಹಿ ಮಾಡುತ್ತಿದ್ದರು ಆದರೆ ಪಾರ್ಶ್ವವಾಯು ಪೀಡಿತರಾದ ನಂತರ ಹೆಬ್ಬಟ್ಟು ಗುರುತು ಹಾಕಲು ಪ್ರಾರಂಭಿಸಿದರು ಎಂದು ಹೇಳುತ್ತಾರೆ. ನಿಪಿಃ10 ಮೃತ್ಯುಪತ್ರ ಬರೆದ ಎಸ್.ಆರ್.ಬದ್ದಿ ನಮ್ಮ ಸಂಬಂಧಿ ಎಂದರೆ ಸರಿಯಲ್ಲ. ಆದರೆ ಒಂದೇ ಜಾತಿಯವರು ಎಂದು ಹೇಳುತ್ತಾರೆ. ಸಾಕ್ಷಿದಾರರಾದ ಆರ್.ಪಿ.ಬದ್ದಿ ಸಹ ನಮ್ಮ ಸಮಾಜದವರು ಎಂದರೆ ಸರಿ. ಇನ್ನೊಬ್ಬ ಸಾಕ್ಷಿದಾರ ಗೋವರ್ಧನ ನನ್ನ ಸಹೋದರ ಎಂದರೆ ಸರಿ. ನಿಪಿಃ10 ನ್ನು ಜವಾಹರಲಾಲಸಾ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಜವಾಹರಲಾಲರಿಗೆ ಸಹಿ ಮಾಡಲು ಬರುವುದಿಲ್ಲ ಎಂದು ವೈದ್ಯರಿಂದ ಪ್ರಮಾಣ ಪತ್ರ ಪಡೆದಿಲ್ಲ. ನಿಪಿಃ10 ರಲ್ಲಿರುವ ಫೋಟೋ ಜವಾಹರಲಾಲಸಾ ನದ್ದಲ್ಲ ಎಂದರೆ

ಸರಿಯಲ್ಲ. ಮೃತ್ಯುಪತ್ರದಲ್ಲಿ ಜವಾಹರಲಾಲ ಇವರ ಆಧಾರ ಕಾರ್ಡ ನಂಬರ ಬರೆಯಿಸಿದ್ದಾರೆ. ಸಾಕ್ಷಿದಾರರ ಆಧಾರ ಕಾರ್ಡ ಸಂಖ್ಯೆಯನ್ನು ಮೃತ್ಯುಪತ್ರದಲ್ಲಿ ಬರೆದಿದ್ದಾರೋ ಇಲ್ಲವೋ ಗೊತ್ತಿಲ್ಲ. ಸದರಿ ದಾಖಲೆಯಲ್ಲಿ ಜವಾಹರಲಾಲಸಾ ಇವರು ಹಾಕಿದ ಹೆಬ್ಬಟ್ಟಿನ ಗುರುತಿಗೆ ಎಮ್ ಡಿ ನದಾಫ್ ವಕೀಲರು ಗುರುತು ಹಾಕಿ ದಸ್ತುರ ಸಹಿ ಮಾಡಿದ್ದಾರೆ. ನಿಪಿಃ10 ಮೃತ್ಯುಪತ್ರದಲ್ಲಿ ದಾವಾ ಆಸ್ತಿಯ ವಿಸ್ತೀರ್ಣ ಹಾಗೂ ಚಕಬಂದಿ ಬರೆಯಲಾಗಿದೆ. ದಿಃ18.09.2014 ರಂದು ದಾವಾ ಆಸ್ತಿ ಜವಾಹರಲಾಲ ಇವರ ಹೆಸರಿನಲ್ಲಿತ್ತು. ಆ ದಿನಾಂಕದಂದು ಜವಾಹರಲಾಲ ಇವರ ಹೆಸರಿನಲ್ಲಿ ಇದ್ದ ಬಗ್ಗೆ ಉತಾರೆ ಹಾಜರಪಡಿಸಿದ್ದೇನೆ. ಮೃತ್ಯುಪತ್ರದ ಆಧಾರದ ಮೇಲೆ ನಾನು ಮಾಲೀಕನಾಗಿದ್ದೇನೆ ಎಂದು ಈ ದಾವೆಯಲ್ಲಿ ಕೇಳಿದ್ದೇನೆ. ಅದಕ್ಕೆ ಅವಶ್ಯವಿರುವ ನ್ಯಾಯಾಲಯದ ಶುಲ್ಕ ತುಂಬಿದ್ದೇನೆ. ಮೃತ್ಯುಪತ್ರದ ಬಗ್ಗೆ ನಾನು ಜಿಲ್ಲಾ ನ್ಯಾಯಾಲಯದಲ್ಲಿ ಪ್ರೊಬೇಟ್ ಗಾಗಿ ಅರ್ಜಿ ಸಲ್ಲಿಸಿದ್ದೇನೆ. ಸದರಿ ಅರ್ಜಿ ಪುರಸ್ಕೃತಗೊಂಡಿದೆ. ಸದರಿ ಆದೇಶದ ಪ್ರತಿ ಹಾಜರಪಡಿಸಿದ್ದೇನೆ. ಜವಾಹರಲಾಲ ನನಗೆ ನನ್ನ ಹೆಸರಿನ ಯಾವುದೇ ಮೃತ್ಯುಪತ್ರ ಬರೆದುಕೊಟ್ಟಿಲ್ಲ ಮತ್ತು ಆಧಾರದ ಮೇಲೆ ನನಗೆ ಯಾವುದೇ ಹಕ್ಕು ಪ್ರಾಪ್ತವಾಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಎತ್ತಿಹಾಕುವ ಉದ್ದೇಶದಿಂದ ನಾನು ಹಾಗೂ ದಸ್ತುಬರಹಗಾರ ಹಾಗೂ ಸಾಕ್ಷಿದಾರರು ಸೇರಿ ಖೊಟ್ಟಿ ಮೃತ್ಯುಪತ್ರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆ ಹಾಜರಪಡಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಳಿದ ಪ್ರತಿವಾದಿಯರು ಗೈರು ಹಾಜರಿರುವ ಕಾರಣ ಅವರ ಪರವಾಗಿ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಿದೆ)

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.